ಕರ್ನಾಟಕ ವಿಧಾನ ಪರಿಷತ್ತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	(268) 166
ಸದಸ್ಯರ ಹೆಸರು	:	ಶ್ರೀ. ಟಿ.ಎ.ಶರವಣ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	:	16.07.2019
ಉತ್ತರಿಸುವ ಸಚಿವರು	:	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದ ಸರ್ಕಾರಿ ಆಸ್ಪತ್ರೆಗಳಿಗೆ ಮಂಜೂರು ಮಾಡಿದ ಒಟ್ಟು ಹುದ್ದೆಗಳೆಷ್ಟು; ಅದರಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು;	(see below)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ತಜ್ಞರು /ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಮತ್ತು ದಂತ ವೈದ್ಯಾಧಿಕಾರಿಗಳ ಮಂಜೂರು ಮತ್ತು ಖಾಲಿ ಹುದ್ದೆಗಳ ಮಾಹಿತಿ.

ವಿವರ	ಮಂಜೂರು	ಗುತ್ತಿಗೆ	ಖಾಲಿ
ತಜ್ಞರು	3395	23	1206
ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು	2586	588	147
ದಂತ ವೈದ್ಯಾಧಿಕಾರಿಗಳು	425	42	60

ಆಯುಷ್ ಇಲಾಖೆ:

ಆಯುಷ್ ಇಲಾಖೆಯಲ್ಲಿ ತಜ್ಞರು/ಹಿ.ವೈ ಮತ್ತು ವೈದ್ಯಾಧಿಕಾರಿಗಳ ಮಂಜೂರು ಮತ್ತು ಖಾಲಿ ಹುದ್ದೆಗಳ ಮಾಹಿತಿ ಈ ಕೆಳಕಂಡಂತಿದೆ.

ವಿವರ	ಮಂಜೂರು	ಗುತ್ತಿಗೆ	ಖಾಲಿ	ಷರಾ
ತಜ್ಞ ವೈದ್ಯರು	130	93	37	ಆಯುಷ್ ಇಲಾಖೆಯಲ್ಲಿನ ಆಸ್ಪತ್ರೆಗಳಲ್ಲಿ ತಜ್ಞತೆವಾರು ಹುದ್ದೆಗಳು ಮಂಜೂರಾಗಿರುವುದಿಲ್ಲ ಈ ಹುದ್ದೆಗಳು ಸಿ.ಎಸ್.ಎಸ್ ಯೋಜನೆಯಡಿ ಮಾತ್ರ ಮಂಜೂರಾಗಿರುತ್ತವೆ.
ಹಿರಿಯ ವೈದ್ಯಾಧಿಕಾರಿಗಳು	137	–	66	–
ವೈದ್ಯಾಧಿಕಾರಿಗಳು	917	–	208	–
ಒಟ್ಟು	**1184**	**93**	**311**	

ಆ)	ರಾಜ್ಯದಲ್ಲಿನ ಜನಸಂಖ್ಯೆಗನುಗುಣವಾಗಿ ಇರಬೇಕಾದ ಸರ್ಕಾರಿ ವೈದ್ಯರ ಸಂಖ್ಯೆ ಎಷ್ಟು; ಇದು ರಾಷ್ಟ್ರೀಯ ವೈದ್ಯ-ರೋಗಿಗಳ ಸರಾಸರಿಗೆ ಹೊಂದಾಣಿಕೆಯಾಗುತ್ತದೆಯೇ;	• ವಿಶ್ವ ಆರೋಗ್ಯ ಸಂಸ್ಥೆ ನಾರ್ಮ್ಸ್ ಪ್ರಕಾರ 1000 ಜನಸಂಖ್ಯೆಗೆ ಒಬ್ಬ ವೈದ್ಯರು ಇರಬೇಕಾಗಿದ್ದು. • ರಾಷ್ಟ್ರೀಯ ಸರಾಸರಿ 11,082 ಜನಸಂಖ್ಯೆಗೆ ಒಬ್ಬ ಸರ್ಕಾರಿ ವೈದ್ಯರು ಇರುತ್ತಾರೆ. • ರಾಜ್ಯದಲ್ಲಿ ಸರಾಸರಿ 13,556 ಜನಸಂಖ್ಯೆಗೆ ಒಬ್ಬ ಸರ್ಕಾರಿ ವೈದ್ಯರು ಇರುತ್ತಾರೆ. • ರಾಷ್ಟ್ರೀಯ ವೈದ್ಯ ಸರಾಸರಿಗೆ ತುಸು ಕಡಿಮೆಯಿರುತ್ತದೆ.
ಇ)	ಹೆಚ್ಚಾಗುತ್ತಿರುವ ವೈದ್ಯರ ಮೇಲಿನ ಹಲ್ಲೆಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, 2015 ರಿಂದ ಈಚೆಗೆ ಜರುಗಿದ ವೈದ್ಯರ ಮೇಲಿನ ಹಲ್ಲೆಗಳ ಪ್ರಕರಣಗಳೆಷ್ಟು; ಇವುಗಳನ್ನು ತಡೆಯಲು ಅನುಸರಿಸಿರುವ ಕ್ರಮಗಳೇನು;	2015 ರಿಂದ ಈಚೆಗೆ ಯಾವುದೇ ವೈದ್ಯರ ಮೇಲಿನ ಹಲ್ಲೆಗಳ ಪ್ರಕರಣಗಳು ಇಲಾಖೆಯಲ್ಲಿ ದಾಖಲಾಗಿರುವುದಿಲ್ಲ. ವೈದ್ಯರುಗಳ ಮೇಲೆ ಹಲ್ಲೆ ತಡೆಯಲು "The Karnataka Prohibition of Violence against Medical Service Personnel & Damage to property in Medicare Service Institutions Act, 2009" ಕಾಯ್ದೆಯನ್ನು ರಾಜ್ಯದಲ್ಲಿ ಜಾರಿಗೆ ತರಲಾಗಿದೆ.
ಈ)	ನಕಲಿ ವೈದ್ಯರ ಪ್ರಮಾಣ ಇತ್ತೀಚೆಗೆ ಹೆಚ್ಚಾಗುತ್ತಿರುವ ಗಂಭೀರತೆಯನ್ನು ಸರ್ಕಾರ ಗಮನಿಸಿದೆಯೇ; ಇಲಾಖೆಯ ಪ್ರಕಾರ ರಾಜ್ಯದಲ್ಲಿ ಈವರೆಗೆ ಗುರುತಿಸಲ್ಪಟ್ಟ ನಕಲಿ ವೈದ್ಯರ ಸಂಖ್ಯೆ ಎಷ್ಟು ಹಾಗೂ ದಂಡದ ಹೊರತು ಕಳೆದ 05 ವರ್ಷಗಳಲ್ಲಿ ಇವರುಗಳ ಮೇಲೆ ಕಠಿಣ ಕ್ರಮ ಜರುಗಿಸಿದ ಪ್ರಕರಣಗಳ ಸಂಖ್ಯೆ ಎಷ್ಟು;	<u>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:</u> ಇಲ್ಲಿಯವರೆಗೆ 2295 ನಕಲಿ ವೈದ್ಯರನ್ನು ರಾಜ್ಯದಲ್ಲಿ ಗುರುತಿಸಲಾಗಿದೆ. • 92 ಕ್ಲಿನಿಕ್‌ಗಳನ್ನು KPME ಕಾಯ್ದೆಯಡಿಯಲ್ಲಿ ಜಪ್ತಿ ಮಾಡಲಾಗಿದೆ. • 7 ಪ್ರಕರಣಗಳಿಗೆ ಪೋಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಿಸಿದೆ. • ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ. <u>ಆಯುಷ್ ಇಲಾಖೆ:</u> ಇಲ್ಲಿಯವರೆಗೆ 3000 ನಕಲಿ ವೈದ್ಯರನ್ನು (ಪಾರಂಪರಿಕ ವೈದ್ಯರು) ಪತ್ತೆ ಹಚ್ಚಲಾಗಿದೆ. ಕಳೆದ 5-ವರ್ಷಗಳಲಿ ನಕಲಿ ವೈದ್ಯರ ವಿರುದ್ಧ ಸುಮಾರು 15 ಪ್ರಕರಣಗಳಲ್ಲಿ ಕ್ರಿಮಿನಲ್ ಮೊಕದ್ದಮ್ಮೆ ದಾಖಲಾಗಿರುತ್ತದೆ.
ಉ)	ವೈದ್ಯರ ಮೇಲಿನ ಹಲ್ಲೆಗಳು ಮತ್ತು ನಕಲಿ ವೈದ್ಯ ಪ್ರಕರಣಗಳಂತಹ ಸವಾಲುಗಳಿಗೆ ಸರ್ಕಾರದ ಮುಂದಿರುವ ಶಾಶ್ವತ ಪರಿಹಾರೋಪಾಯಗಳು ಯಾವುವು?	<u>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:</u> ವೈದ್ಯರುಗಳ ಮೇಲೆ ಹಲ್ಲೆ ತಡೆಯಲು "The Karnataka Prohibition of Violence against Medical Service Personnel & Damage to property in Medicare Service Institutions Act, 2009" ಕಾಯ್ದೆಯನ್ನು ರಾಜ್ಯದಲ್ಲಿ ಜಾರಿಗೆ ತರಲಾಗಿದೆ. ಸದರಿ ಕಾಯ್ದೆಗಳನ್ವಯ ಸರ್ಕಾರ /ಖಾಸಗಿ ಆಸ್ಪತ್ರೆಗಳಲ್ಲಿ ಹಾಗೂ ಪ್ರಮುಖವಾಗಿ ಹೆರಿಗೆ ಆಸ್ಪತ್ರೆಗಳ ಮೇಲೆ ಮತ್ತು ವೈದ್ಯರು ಮತ್ತು ವೈದ್ಯೇತರ ಸಿಬ್ಬಂದಿ (ಶುಶ್ರೂಷಕರು, ವೈದ್ಯಕೀಯ ವಿದ್ಯಾರ್ಥಿಗಳು) ಇವರುಗಳ ಮೇಲೆ ಹಲ್ಲೆ ನಡೆಸಿದ್ದಲ್ಲಿ 03-ವರ್ಷ ಜೈಲು ಶಿಕ್ಷೆ ಹಾಗೂ ರೂ.50,000/- ರವರೆಗೆ ದಂಡ ವಿಧಿಸಬಹುದಾಗಿರುತ್ತದೆ. ಸದರಿ ಪ್ರಕರಣಗಳು (cognizable) ವೇದ್ಯ ಅಪರಾಧ ಮತ್ತು ಜಾಮೀನು ರಹಿತ (non-bailable) ಅಪರಾಧ ಆಗಿರುತ್ತದೆ.

ಯಾವುದೇ ವೈದ್ಯಕೀಯ ಉಪಕರಣಗಳು, ಸಲಕರಣೆಗಳು ಹಾನಿಯಾದಲ್ಲಿ ಸದರಿ ಯಂತ್ರಗಳ ಮೊತ್ತದ 2 ಪಟ್ಟು ದಂಡ ವಿಧಿಸಬಹುದಾಗಿರುತ್ತದೆ. 1964ರ ಕರ್ನಾಟಕ ಭೂ ಕಂದಾಯ ಕಾಯ್ದೆಯಡಿ ಸದರಿ ದಂಡಗಳನ್ನು ವಸೂಲಿ ಮಾಡುವ ಷರತ್ತಿಗೆ ಒಳಪಟ್ಟಿರುತ್ತದೆ.

ಆಯುಷ್ ಇಲಾಖೆ:

ನಕಲಿ ವೈದ್ಯರ ಪ್ರಕರಣಗಳನ್ನು ಶಾಶ್ವತವಾಗಿ ನಿಯಂತ್ರಣ ಮಾಡಲು ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 325 ಪಿಐಎಂ 2017, ದಿನಾಂಕ: 29.08.2017ರಲ್ಲಿ **"ಜಿಲ್ಲಾಧಿಕಾರಿ /ಅವರ ನಾಮನಿರ್ದೇಶಿತ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು /ಅವರ ನಾಮ ನಿರ್ದೇಶಿತರನ್ನೊಳಗೊಂಡಂತೆ, "ಜಿಲ್ಲಾ ಮಟ್ಟದ ವಿಶೇಷ ಪಡೆಯನ್ನು ರಚಿಸಿ ಅಧಿಸೂಚಿಸಿದೆ".** (ಪ್ರತಿ ಲಗತ್ತಿಸಿದೆ.).

- ಮೇಲೆ ರಚಿಸಲಾದ ಜಿಲ್ಲಾ ವಿಶೇಷ ಕಾರ್ಯಪಡೆಯು ತನ್ನ ಜಿಲ್ಲಾ ವ್ಯಾಪ್ತಿಯಲ್ಲಿ ನಕಲಿ ವೈದ್ಯವೃತ್ತಿ ನಡೆಸುತ್ತಿರುವ ನಕಲಿ ವೈದ್ಯರನ್ನು ಪತ್ತೆ ಹಚ್ಚಿ ಅವರ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸತಕ್ಕದ್ದು.
- ಇದಕ್ಕೆ ತಗಲುವ ವೆಚ್ಚವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಆಯುಷ್ ಇಲಾಖೆಯು ಭರಿಸತಕ್ಕದ್ದು.
- ಜಿಲ್ಲಾ ವಿಶೇಷ ಪಡೆಯು ಮಾಸಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿದೆ.

ಹಾಲಿ ಜಾರಿಯಲ್ಲಿರುವ "The Karnataka Ayurvedic, Naturopathy, Siddha, Unani and Yoga Practitioners' Registration and Medical Practitioners Miscellaneous provisions (Amendment) Act, 2016" ರನ್ವಯ ನಕಲ ವೈದ್ಯರ ಕಲಂ 36ರಲ್ಲಿ ಈ ಕೆಳಗಿನಂತೆ ದಂಡನೆ ವಿಧಿಸಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

"Any person who act in contravention of the provisions of section 34 and 35 of this Act, shall on conviction, be punished with fine which may extend to rupees twenty five thousand for the first offence, to a fine of rupees two lakhs fifty thousand and imprisonment of one year for the second offence and a fine of rupees five lakhs and imprisonment for a term not exceeding three years for every subsequent offence after the conviction of such person for such subsequent offence".

ಆಕುಕ 65 ಪಿಐಎಂ 2019

(ಶಿವಾನಂದ ಎಸ್.ಪಾಟೀಲ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

(127)

ಕರ್ನಾಟಕ ಸರ್ಕಾರ

ಸಂಖ್ಯೆ: ಆಕುಕ 325 ಪಿಐಎಂ 2017

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:29.08.2017

ಅಧಿಸೂಚನೆ

ಕರ್ನಾಟಕ ರಾಜ್ಯದಲ್ಲಿ ಅರ್ಹ ವಿದ್ಯಾರ್ಹತೆ ಇಲ್ಲದೆ ಮತ್ತು ಅಧಿಕೃತ ನೋಂದಾವಣೆ ಹೊಂದದೆ ವೈದ್ಯವೃತ್ತಿ ನಡೆಸುತ್ತಿರುವ ನಕಲಿ ವೈದ್ಯರನ್ನು ಪತ್ತೆಹಚ್ಚಿ, ಅವರ ವಿರುದ್ಧ ಕಾರ್ಯಾಚರಣೆ ನಡೆಸಿ, ಕಾನೂನು ಪ್ರಕಾರ ಸೂಕ್ತ ಕ್ರಮ ಕೈಗೊಳ್ಳುವ ಸಲುವಾಗಿ ಹೊರಡಿಸಲಾಗಿದ್ದ ಅಧಿಸೂಚನೆ ಸಂಖ್ಯೆ: ಆಕುಕ ಆಕುಕ 215 ಪಿಐಎಂ 2007, ದಿನಾಂಕ:13.12.2007ನ್ನು ಮಾರ್ಪಡಿಸಿ, ಸರ್ಕಾರವು ಈ ಕೆಳಕಂಡವರುಗಳನ್ನೊಳಗೊಂಡ "ಜಿಲ್ಲಾ ಮಟ್ಟದ ವಿಶೇಷ ಪಡೆ" ಯನ್ನು ರಚಿಸಿ ಅಧಿಸೂಚಿಸಿದೆ.

1. ಜಿಲ್ಲಾಧಿಕಾರಿ/ಅವರ ನಾಮನಿರ್ದೇಶಿತರು.
2. ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು/ಅವರ ನಾಮನಿರ್ದೇಶಿತರು.
3. ಜಿಲ್ಲಾ ಆಯುಷ್ ಅಧಿಕಾರಿಗಳು.
4. ನೋಂದಣಾಧಿಕಾರಿಗಳು, ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯಮಂಡಳಿ.
5. ಜಿಲ್ಲಾ ಹಂತದ ನಾಮನಿರ್ದೇಶಿತ ವಕೀಲರು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ನಾಮನಿರ್ದೇಶಿಸಿದ ಒಬ್ಬ ವಕೀಲರು).
6. ಜಿಲ್ಲ ಮಟ್ಟದ ಸಮಾಜ ಕಾರ್ಯಕರ್ತರು (ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಂದ ನಾಮನಿರ್ದೇಶಿಸಲ್ಪಟ್ಟ ಒಬ್ಬ ಸಾಮಾಜಿಕ ಕಾರ್ಯಕರ್ತ).

- ಮೇಲೆ ರಚಿಸಲಾದ ಜಿಲ್ಲಾ ವಿಶೇಷ ಕಾರ್ಯಪಡೆಯು ತನ್ನ ಜಿಲ್ಲಾ ವ್ಯಾಪ್ತಿಯಲ್ಲಿ ನಕಲಿ ವೈದ್ಯವೃತ್ತಿ ನಡೆಸುತ್ತಿರುವ ನಕಲಿ ವೈದ್ಯರನ್ನು ಪತ್ತೆ ಹಚ್ಚಿ, ಅವರ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸತಕ್ಕದ್ದು.
- ಇದಕ್ಕೆ ತಗಲುವ ವೆಚ್ಚವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಆಯುಷ್ ಇಲಾಖೆಯು ಭರಿಸತಕ್ಕದ್ದು.
- ಜಿಲ್ಲಾ ವಿಶೇಷ ಪಡೆಯು ಮಾಸಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿದ.

ಕರ್ನಾಟಕ ಆಯುರ್ವೇದ ಮತ್ತು ಯುನಾನಿ ಮಂಡಳಿ KARNATAKA AYURVEDIC & UNANI PRACT... No. 980 ದಿನಾಂಕ 4/9/17

04/09/17

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾವೈಪ & ಸಮನ್ವಯ)

<u>ಇವರಿಗೆ:</u> ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಇದನ್ನು ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಿ ಈ ಶಾಖೆಗೆ 100 ಪ್ರತಿಗಳನ್ನು ಕಳುಹಿಸುವಂತೆ ಕೋರಿದೆ.

ಮುಂದಿನ ಅಗತ್ಯ ಕ್ರಮಕ್ಕಾಗಿ:

1. ಪ್ರಧಾನ ಮಹಾಲೇಖಪಾಲರು (ಜಿ.&ಎಸ್.ಎಸ್.ಎ/ಇ&ಆರ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560 001.
2. ಪ್ರಧಾನ ಮಹಾಲೇಖಪಾಲರು (ಎ.&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ, ವಿಧಾನಸೌಧ, ಬೆಂಗಳೂರು.
5. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.
6. ನಿರ್ದೇಶಕರು, ಆಯುಷ್ ನಿರ್ದೇಶನಾಲಯ, ಧನ್ವಂತರಿ ರಸ್ತೆ, ಬೆಂಗಳೂರು-560 009.
7. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು.
8. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು / ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು / ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು / ಜಿಲ್ಲಾ ಆಯುಷ್ ಅಧಿಕಾರಿಗಳು (ಆಯುಷ್ ನಿರ್ದೇಶಕರ ಮುಖಾಂತರ)
9. ನೋಂದಣಾಧಿಕಾರಿಗಳು, ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯಮಂಡಳಿ, ಬ್ರಿಗೇಡ್ ಪ್ಲಾಜಾ, ಮೊದಲನೇ ಮಹಡಿ, ಎಸ್.ಸಿ.ರೋಡ್, ಆನಂದರಾವ್ ವೃತ್ತ, ಬೆಂಗಳೂರು-09.
10. ನೋಂದಣಾಧಿಕಾರಿಗಳು, ಕರ್ನಾಟಕ ಹೋಮಿಯೋಪತಿ ಮಂಡಳಿ, ಧನ್ವಂತರಿ ರಸ್ತೆ, ಬೆಂಗಳೂರು.

ಪ್ರತಿ ಮಾಹಿತಿಗಾಗಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
2. ಸರ್ಕಾರದ ಉಪ ಕಾರ್ಯದರ್ಶಿ-3 ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರಿಗೆ.
3. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.